



ಜೊತೆಗೆ, ತನ್ನ ಸಿಡುಕು ಸ್ವಭಾವವನ್ನೂ ಬದಲಿಸಿಕೊಳ್ಳುತ್ತಾಳೆ. ಇಲ್ಲಿನ ಗೆಲುವು ಈಜಿನಕೊಳಕ್ಕೆ ಸೀಮಿತವಾಗದೆ, ಜೀವನಕ್ಕೂ ಅನ್ವಯಿಸುತ್ತದೆ. 'ಸ್ನೇಹಗ್ರಾಮದ ಸಂಪತ್ತು' ಕೃತಿಯ ಜಗತ್ತು ಮತ್ತಷ್ಟು ವಿಶಿಷ್ಟವಾದುದು. ಎಚ್‌ಐವಿ ಸೋಂಕಿಗೊಳಗಾದ ಮಕ್ಕಳು ಒಂದುಗೂಡಿರುವ 'ಸ್ನೇಹಗ್ರಾಮ'ದಲ್ಲಿ ನಡೆಯುವ ಈ ಕಥೆ, ಮಕ್ಕಳೊಂದಿಗೆ ಹಿರಿಯರ ತಿಳಿವಳಿಕೆಯನ್ನೂ ಹೆಚ್ಚಿಸುವಂತಹದ್ದು. 'ಟಿಕೆಟ್ ಇಲ್ಲ, ಪ್ರಯಾಣ ನಿಲ್ಲಲ್ಲ' ಕೃತಿಯಲ್ಲಿನ ಪ್ರಸಂಗಗಳು ವಲಸೆ ಕಾರ್ಮಿಕರ ಬದುಕಿನ ಸಂಕಷ್ಟಗಳನ್ನು ಮನಗಾಣಿಸುವಂತಹವು. ಅಸಾಧಾರಣ ಹೆಣ್ಣೊಬ್ಬಳ 'ನಂದಿನಿ ಎಂಬ ಜಾಣೆ' ಕೃತಿ, ಒಂಟಿ ತಾಯಿಯೊಬ್ಬಳ ಮಮತೆ ಹಾಗೂ ಛಲವನ್ನು ಕಟ್ಟಿಕೊಡುವಂತಹದ್ದು. 'ಮರಳಿ ಮನೆಗೆ' ದುಡಿಯುವ ಮಕ್ಕಳ ಶಾಲೆಯ ಹಂಬಲದ ಕಥೆ.

ಈ ಪುಸ್ತಕಗಳು ಮಕ್ಕಳ ಕೇಂದ್ರವಾಗಿಟ್ಟುಕೊಂಡಿದ್ದರೂ, ಮಕ್ಕಳ ಬೆನ್ನ ಹಿಂದಿನ ಹಿರಿಯರನ್ನೂ ಬಹು ಆಸ್ಥೆಯಿಂದ ಚಿತ್ರಿಸಿದೆ. ಸ್ನೇಹಗ್ರಾಮದ ಕಥೆಯ ಕೃಷ್ಣನ ಚಿಕ್ಕಪ್ಪ ಕಪ್ಪಣ್ಣ, 'ಗೆದ್ದೇ ಬಿಟ್ಟೆ' ಕಥನದಲ್ಲಿ ದಿವ್ಯಾಳನ್ನು ಪೊರೆಯುವ ಮುತ್ತುರಾಮ್‌ರಂಥ ವ್ಯಕ್ತಿತ್ವಗಳು ಮುಖ್ಯ ಪಾತ್ರಗಳ ನಡುವೆಯೂ ತಮ್ಮ ಇರುವನ್ನು ಪ್ರಕಟಪಡಿಸುವಷ್ಟು ಚೇತೋಹಾರಿಯಾಗಿವೆ. ವಿಭಿನ್ನ ಹಿನ್ನೆಲೆ, ವಿಶಿಷ್ಟ ಸಾಮರ್ಥ್ಯದ ಮಕ್ಕಳನ್ನು ಪರಿಚಯಿಸುವ ನೆಪದಲ್ಲಿ ಗ್ರಾಮಭಾರತದ ಹಲವು ರೂಪಗಳನ್ನು ಮಕ್ಕಳಿಗೆ ಕಾಣಿಸಲು ಈ ಕೃತಿಗಳು ಪ್ರಯತ್ನ ನಡೆಸಿವೆ.

ಕಥೆಗಳಾಚೆಗೆ ಎರಡು ಕಾರಣಗಳಿಂದಾಗಿ 'ಪರಿ' ಪುಸ್ತಕಗಳು ಗಮನಸೆಳೆಯುತ್ತವೆ. ಒಂದು, ಕನ್ನಡ ಅನುವಾದದಲ್ಲಿನ ಚೆಲುವು. ಮತ್ತೊಂದು, ಪುಸ್ತಕಗಳ ಭೌತಿಕ ಸೌಂದರ್ಯ. ●

ಸ್ನೇಹಗ್ರಾಮದ ಸಂಸತ್ತು; ಲೇ: ವಿಶಾಖ ಜಾರ್ಜ್; ಕ: ಪ್ರಸಾದ್ ನಾಯ್ಕ್; ಪು: 152; ಬೆ: ₹ 150
ಟಿಕೆಟ್ ಇಲ್ಲ, ಪ್ರಯಾಣ ನಿಲ್ಲಲ್ಲ; ಲೇ: ಸುಬೂಹಿ ಜಿವಾನಿ; ಕ: ಅಬ್ಬೂರು ಪ್ರಕಾಶ್; ಪು: 76; ಬೆ: ₹ 125
ಮರಳಿ ಮನೆಗೆ; ಲೇ: ಪ್ರೀತಿ ಡೇವಿಡ್; ಕ: ರಾಜಾರಾಂ ತಲ್ಲೂರು; ಪು: 80; ಬೆ: ₹ 125
ಗೆದ್ದೇ ಬಿಟ್ಟೆ..!; ಲೇ: ನಿವೇಧಾ ಗಣೇಶ್; ಕ: ಸಂತೋಷ ತಾಮ್ರಪರ್ಣಿ; ಪು: 88; ಬೆ: ₹ 125
ನಂದಿನಿ ಎಂಬ ಜಾಣೆ; ಲೇ: ಅಪರ್ಣಾ ಕಾರ್ತಿಕೇಯನ್; ಕ: ವಿ. ಗಾಯತ್ರಿ; ಪು: 104; ಬೆ: ₹ 150

ಐದೂ ಪುಸ್ತಕಗಳ ಪ್ರಕಾಶಕರು: ಬಹುರೂಪಿ, ಬೆಂಗಳೂರು. ಫೋನ್: 7019182729.